JULY 03, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

**1. ವಚನ ಸಾಹಿತ್ಯ ಸಂಗ್ರಹಿಸಿ,** ಜನ ಮಾನಸಕ್ಕೆ ತಲುಪಿಸುವಲ್ಲಿ, ಡಾಕ್ಟರ ಫ.ಗು. ಹಳಕಟ್ಟಿ ಅವರ ಕೊಡುಗೆ ಅಪಾರ ಎಂದು, ಕರ್ನಾಟಕ ಬಾಲ ವಿಕಾಸ ಅಕಾದೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಹೇಳಿದ್ದಾರೆ. ಧಾರವಾಡ ಜಿಲ್ಲಾಡಳಿತ, ಫ.ಗು. ಹಳಕಟ್ಟಿ ಅವರ, ಜನ್ಮ ದಿನಾಚರಣೆ ಹಿನ್ನೆಲೆ ಆಯೋಜಿಸಿದ್ದ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ತಮ್ಮ ಸರ್ವಸ್ವವನ್ನು, 250 ಶರಣರ, 10 ಸಾವಿರಕ್ಕೂ ಹೆಚ್ಚು ವಚನಗಳ ಸಂಗ್ರಹ ಮತ್ತು ಪ್ರಕಟಣೆಗೆ ಬಳಸಿದ, ಮಹಾನುಭಾವ ಫ.ಗು.ಹಳಕಟ್ಟಿ ಅವರು, ಪ್ರಾತಃ ಸ್ಮರಣೀಯರು ಎಂದು, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ನುಡಿದರು.

<><><>

**2. ಧಾರವಾಡ ಜಿಲ್ಲೆಯಲ್ಲಿ,** ಬಿಸಿಯೂಟ ನಿರ್ವಹಣೆಯ ಹೊಣೆಯನ್ನು, ಸರ್ಕಾರೇತರ ಸಂಸ್ಥೆಗಳೇ ನಿಭಾಯಿಸುವಂತೆ, ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ಬಿಸಿಯೂಟ ಪೂರೈಸುವ, ಸರ್ಕಾರೇತರ ಸಂಸ್ಥೆಗಳು, ಶಿಕ್ಷಣ ಇಲಾಖೆ ಹಾಗೂ ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳೊಂದಿಗೆ ಸಚಿವರು, ಸಭೆ ನಡೆಸಿದರು. ಶಿಕ್ಷಕರನ್ನು ಶೈಕ್ಷಣಿಕ ಕಾರ್ಯ ಚಟುವಟಿಕೆಗಳಿಗೆ ಮಾತ್ರ ಸೀಮಿತಗೊಳಿಸಿ, ಗುಣಮಟ್ಟದ ಕಲಿಕೆ ಮತ್ತು ಬೋಧನೆಗೆ, ಆದ್ಯತೆ ನೀಡಲು, ಮಿಷನ್ ವಿದ್ಯಾಕಾಶಿ ಮೂಲಕ ಯೋಜಿಸಲಾಗುತ್ತಿದೆ ಎಂದು, ಸಚಿವ ಲಾಡ ಹೇಳಿದರು.

<><><>

**3. ಧಾರವಾಡ ಜಿಲ್ಲೆ, ಹುಬ್ಬಳ್ಳಿ** ತಾಲೂಕು, ಕಿರೇಸೂರ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಆಂಗ್ಲ ಭಾಷೆ ಶಿಕ್ಷಕ, ಲಿಂಗರಾಜ ರಾಮಾಪೂರ ಅವರಿಗೆ, ಬೆಂಗಳೂರಿನ ಜವಹರಲಾಲ್ ನೆಹರು ಸಂಶೋಧನಾ ಕೇಂದ್ರದಿಂದ ಇತ್ತೀಚಿಗೆ ಪ್ರದಾನಿಸಲಾದ, ಸಿ.ಎನ್.ಆರ್.ರಾವ್ ಪ್ರಶಸ್ತಿಯ ಮೊತ್ತ, 30 ಸಾವಿರ ರೂಪಾಯಿಗಳನ್ನು, ತಾವು ಕಲಿತ, ನವಲಗುಂದ ತಾಲೂಕು, ಮೊರಬ ಗ್ರಾಮದ ಸರ್ಕಾರಿ ಶಾಲೆಗೆ, ವೈಜ್ಞಾನಿಕ ಕಾರ್ಯಕ್ರಮ ಆಯೋಜಿಸಲು, ದತ್ತಿ ನಿಧಿಯಾಗಿ ದೇಣಿಗೆ ನೀಡಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಶಿಕ್ಷಕ ಲಿಂಗರಾಜ ರಾಮಾಪೂರ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**4. ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕು,** ಹೊನ್ನೇತಾಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು, ಮೊಬೈಲ್ ಬಳಸದಿರಲು, ತಮ್ಮ ಶಿಕ್ಷಕರ ಸಮ್ಮುಖದಲ್ಲಿ ಪ್ರತಿಜ್ಞೆ ಕೈಗೊಂಡಿದ್ದಾರೆ.

<><><>

**5. ಧಾರವಾಡದ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ** – ಟ್ರಿಪಲ್ ಐ.ಟಿ. ಸಂಸ್ಥೆಯ, 7ನೇ ಘಟಿಕೋತ್ಸವ ನಾಳೆ ಬೆಳಗ್ಗೆ 10 ಗಂಟೆಗೆ, ಸಂಸ್ಥೆಯ ಸಭಾಂಗಣದಲ್ಲಿ ಜರುಗಲಿದೆ. ಕೇಂದ್ರ ವಿಜ್ಞಾನ ಹಾಗೂ ಕೈಗಾರಿಕೆಗಳ ಸಂಶೋಧನಾ ಸಂಸ್ಥೆ – ಸಿ.ಎಸ್.ಐ.ಆರ್. ಮಹಾ ನಿರ್ದೇಶಕರಾದ ಎನ್. ಕಲೈಸೆಲ್ವಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಟ್ರಿಪಲ್ ಐ.ಟಿ. ನಿರ್ದೇಶಕ ಎಸ್.ಆರ್. ಮಹದೇವ ಪ್ರಸನ್ನ, ಮಾಹಿತಿ ನೀಡಿ, ವಿದ್ಯಾ ಶಕ್ತಿ ಯೋಜನೆ ಅಡಿ, ವಿಜ್ಞಾನ ಹಾಗೂ ಗಣಿತ ಶಿಕ್ಷಕರ ಕೊರತೆ ಇರುವ ಶಾಲೆಗಳಲ್ಲಿ, ಆನ್ಲೈನ್ ತರಗತಿ ಯೋಜಿಸಲಾಗಿದೆ ಎಂದರು.

<><><>

**6. ಬಳ್ಳಾರಿಯ, ವಿಜಯನಗರ** ಶ್ರೀ ಕೃ  ್ಣದೇವರಾಯ ವಿಶ್ವವಿದ್ಯಾಲಯದ, ಎರಡು ಪ್ರಕರಣಗಳ ತನಿಖೆಯನ್ನು, ಬೆಳಗಾವಿಯ ನಿವೃತ್ತ ನ್ಯಾಯಾಧೀಶ ಡಿ.ಎಸ್.ಶಿಂಧೆ ಆರಂಭಿಸಿದ್ದಾರೆ ಎಂದು, ಉಪ ಕುಲಪತಿ ಎಂ.ಮುನಿರಾಜು ತಿಳಿಸಿದ್ದಾರೆ.

<><><>

**7. ಉತ್ತರಕನ್ನಡ ಜಿಲ್ಲೆಯ, ಬೆಟ್ಟದ** ಭೂಮಿಯಲ್ಲಿ, ಬಿದಿರು ಕೃಷಿ ಕೈಗೊಳ್ಳಲು, ಬೆಟ್ಟ ಬಳಕೆದಾರರು ಮುಂದಾಗಬೇಕು ಎಂದು, ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ಜಿ.ಆರ್. ಅಜ್ಜಯ್ಯ ಹೇಳಿದ್ದಾರೆ. ಬೆಟ್ಟ ಸುಸ್ಥಿರ ಅಭಿಯಾನದ ನಿಯೋಗ, ಶಿರಸಿಯಲ್ಲಿ, ಭೇಟಿ ಮಾಡಿ, ಚರ್ಚಿಸಿತು. ಬೆಟ್ಟ ಭೂಮಿ, ಅರಣ್ಯ ಇಲಾಖೆಯ ಸುಪರ್ದಿಗೆ ಒಳಪಡುತ್ತದೆ. ಸಮುದಾಯದ ಸಹಭಾಗಿತ್ವದಲ್ಲಿ, ಬೆಟ್ಟದ ವನೀಕರಣಕ್ಕೆ, ಸ್ಥಳೀಯರಿಗೆ ಅರಣ್ಯ ಇಲಾಖೆ ಸಹಕಾರ ನೀಡಲಿದೆ ಎಂದರು.

<><><>

**8. ಭಾರತೀಯ ರೆಡ್ ಕ್ರಾಸ್ ಸೊಸಾಯಿಟಿ,** ದಕ್ಷಿಣಕನ್ನಡ ಜಿಲ್ಲಾ ಘಟಕದಿಂದ, 6 ಕೋಟಿ ರೂಪಾಯಿ ವೆಚ್ಚದಲ್ಲಿ ರೆಡ್ ಕ್ರಾಸ್ ಶತಮಾನೋತ್ಸವ ಕಟ್ಟಡ, ನೂತನವಾಗಿ ನಿರ್ಮಿಸಿದೆ. ಉದ್ಘಾಟನೆಗೆ, ರೆಡ್ ಕ್ರಾಸ್ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಹಾಗೂ ರಾಜ್ಯಪಾಲ, ಥಾವರಚಂದ್ ಗೆಹ್ಲೋಟ್ ಅವರನ್ನು, ದಕ್ಷಿಣಕನ್ನಡ ರೆಡ್ ಕ್ರಾಸ್ ಘಟಕದ ಜಿಲ್ಲಾಧ್ಯಕ್ಷ, ಚಾರ್ಟರ್ಡ್ ಅಕೌಂಟಂಟ್, ಶಾಂತಾರಾಮ ಶೆಟ್ಟಿ ಹಾಗೂ ರಾಜ್ಯ ಘಟಕದ ಅಧ್ಯಕ್ಷ, ಬಸ್ರೂರು ರಾಜೀವ ಶೆಟ್ಟಿ ಆಮಂತ್ರಿಸಿದ್ದಾರೆ.

<><><>

**9. ಸ್ವಾಧೀನಾನುಭವ ಪತ್ರ (ಓ.ಸಿ.)** ಹಾಗೂ ನಿರ್ಮಾಣ ಕಾರ್ಯಾರಂಭ ಪತ್ರ (ಸಿ.ಸಿ.) ಹೊಂದಿರದ, ವಾಣಿಜ್ಯ, ವಸತಿ ಕಟ್ಟಡಗಳಿಗೆ, ವಿದ್ಯುತ್ ಸಂಪರ್ಕ ಕಲ್ಪಿಸದಿರಲು, ಸಚಿವ ಸಂಪುಟ ನಿರ್ಧರಿಸಿದೆ. ಚಿಕ್ಕಬಳ್ಳಾಪುರ ಜಿಲ್ಲೆ, ನಂದಿ ಗಿರಿಧಾಮದಲ್ಲಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಈ ವಿಷಯ ತಿಳಿಸಿ, ನಿಯಮ ಉಲ್ಲಂಘಿಸಿ, ಕಟ್ಟಡ ಕಟ್ಟಿದವರಿಗೆ, ಸೌರ ವಿದ್ಯುತ್ ಅಳವಡಿಸಿಕೊಳ್ಳಲೂ ಸಹ, ಪರವಾನಿಗೆ ಇಲ್ಲ ಎಂದು, ಸ್ಪಷ್ಟ ಪಡಿಸಿದರು.

<><><>

**10. ವಿಜಯನಗರ ಜಿಲ್ಲೆ, ಹೊಸಪೇಟೆಯ,** ತುಂಗಭದ್ರಾ ಜಲಾಶಯದ ಆರು ಕ್ರಸ್ಟ್ ಗೇಟ್‌ಗಳಿಂದ, 15 ಸಾವಿರಕ್ಕೂ ಅಧಿಕ ಕ್ಯೂಸೆಕ್ ನಷ್ಟು ನೀರನ್ನು, ನದಿಗೆ ಹರಿ ಬಿಡಲಾಗಿದೆ. ಜಲಾಶಯ ಸಂಪೂರ್ಣ ಭರ್ತಿಯಾಗಲು, ಕೇವಲ 8 ಅಡಿಗಳಷ್ಟು ಬಾಕಿ ಇದೆ. ನದಿ ಪಾತ್ರದ ಜನ ತಮ್ಮ ಜಾನುವಾರುಗಳೊಂದಿಗೆ, ಸುರಕ್ಷಿತ ಸ್ಥಳಕ್ಕೆ ತೆರಳುವಂತೆ, ಜಲಾಶಯ ಮಂಡಳಿ ಮುನ್ನೆಚ್ಚರಿಕೆ ನೀಡಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**